


ಇಲ್ಲದ ರೊಟ್ಟಿಯನ್ನು ತಟ್ಟುವ ಅಭಿನಯದ
ಹೆಣ್‌ವೇಷದ ಗಂಡುಕೈಗಳ ಪ್ರಹಸನದಲ್ಲಿ
ಇಲ್ಲದ ಬೆಂಕಿಗೂ ಸಹ ಸುಡುವ ಪಾರ್ಟು ಸಿಕ್ಕಿತು
ಅದು ಚೌರಿಯ ಮುಂಗುರುಳನ್ನು ಸುಡಲು ಹಿಂಜರಿಯಿತು.

ಅಷ್ಟರಲ್ಲಿ ಒಂದು ಅಶರೀರವಾಣಿ
ಕೇದಗೆ ಕಂಪಿನೊಂದಿಗೆ ಬೀಸಿ ಬಂತು:
ನಿಮ್ಮ ಮಾತುಗಳನ್ನೇ ನೀವು ಆಡಿದರೆ
ಅದೆಂತು ನಾಟಕ
ನಿಮ್ಮದಲ್ಲದ ಮಾತುಗಳನ್ನು ನಿಮ್ಮದೇ ಅನಿಸುವಂತೆ
ಆಡಿಬಿಡಿ ಅಥವಾ ನಿಮ್ಮದನ್ನೇ ಇನ್ನಾರದೋ ಎಂಬಂತೆ
ರಿಯಾಲಿಟಿ ಆಗಲೇ ಶೋ ಆಗುತ್ತದೆ
ಅಥವಾ ಉಲ್ಟಾ

ಬೀದಿದೀಪದ ಪ್ರಭೆಯೊಂದು ಕತ್ತಲಿನೊಡನೆ
ಮಿಕ್ಸ್ ಆಗುತ್ತ ಸುರಿಯುತ್ತಿದೆ
ಎಂದೋ ಎಲ್ಲೆಲ್ಲಿಗೋ ಕೆಲಸ ಹುಡುಕಿ ಹೋದವರೆಲ್ಲ
ವಾಪಸು ಬಂದು ಅದರ ಕೆಳಗೆ ಸದ್ದಿರದೆ ನಿಂತಿದ್ದಾರೆ
ಪ್ರವೇಶದ ಇಶಾರೆಗೆ ಕಾದು
ಪ್ರಾಣವನ್ನೆ ತಿನ್ನುವಂತೆ ದಟ್ಟವಾಗುತ್ತಿದೆ
ಕಣ್ಮರೆಯ ಕೇದಗೆಯ ಜಾದು